ಸೂಚನೆಗಳು:

- ವಿಷಯದ ಕುರಿತು ಸಾರಲೇಖನವನ್ನು 250 ರಿಂದ 300 ಪದಗಳಲ್ಲಿ ನೀಡುವುದು. ಮಂಡಿಸುವ ಪತ್ರಿಕೆ 3000 ರಿಂದ 3500 ಪದಗಳಿಗೆ ಸೀಮಿತಗೊಳಿಸಿಕೊಳ್ಳುವುದು.
- ಪತ್ರಿಕೆಯನ್ನು ನಾಲ್ಕು ಕಡೆಗಳಲ್ಲಿ ಒಂದು ಇಂಚಿನ ಮಾರ್ಜಿನ್ ಬಿಟ್ಟು ಒಂದು ಇಂಚು ಸ್ಪೇಸ್ ನೀಡಿ ಎ4 ಶೀಟ್‌ನ ಒಂದು ಬದಿಗೆ ವರ್ಡ್ ಡಾಕ್ಯುಮೆಂಟ್‌ನಲ್ಲಿ ಸಿದ್ಧಪಡಿಸುವುದು.
- ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಫಾಂಟ್ ಸೈಜ್ 14ರಲ್ಲಿ ಪ್ರಬಂಧವನ್ನು ಸಿದ್ಧಪಡಿಸಿ ಕಳುಹಿಸುವುದು.
- ಲೇಖಕರ ಮಾಹಿತಿಯನ್ನು ಕೊನೆಯಲ್ಲಿ ನೀಡುವುದು.
- ಪ್ರಬಂಧ ಮಂಡನೆಗೆ 10 ನಿಮಿಷಗಳ ಕಾಲಾವಕಾಶವಿರುತ್ತದೆ.
- ಅನ್ಯಕಾರ್ಯನಿಮಿತ್ತ ರಜೆಯನ್ನು ವ್ಯವಸ್ಥೆಮಾಡಲಾಗುವುದು (OOD).
- ತಮ್ಮ ಪ್ರತಿಗಳನ್ನು ಸೂಚಿಸಿರುವ ಮಿಂಚಂಚೆಯ ವಿಳಾಸಕ್ಕೆ ನಿಗದಿತ ಸಮಯಕ್ಕೆ ತಲುಪುವಂತೆ ಕಳುಹಿಸುವುದು. ಮಿಂಚಂಚೆ: kjckannadaseminar2018@gmail.com
- ಪೂರ್ಣ ಪತ್ರಿಕೆಯೊಂದಿಗೆ ಡಿಡಿ ಕಳುಹಿಸುವುದು. ಡಿಡಿ ಕಳುಹಿಸಬೇಕಾಗಿರುವ ವಿವರಗಳು: 'The Principal, Kristu Jayanti College, Bangalore.

ವಿಚಾರ ಸಂಕಿರಣ ನಿರ್ವಹಣಾ ಸಮಿತಿ

ಅಧ್ಯಕ್ಷತೆ — **ರೆ.ಫಾ. ಜೋಸ್‌ಕುಟ್ಟಿ ಪಿ.ಡಿ.** ಪ್ರಾಂಶುಪಾಲರು

ಸಲಹಾ ಸಮಿತಿ — **ರೆ.ಫಾ. ಅಗಸ್ಟಿನ್ ಜಾರ್ಜ್** ಉಪ ಪ್ರಾಂಶುಪಾಲರು

ರೆ.ಫಾ. ಲಿಜೊ ಪಿ. ಥಾಮಸ್ ವಿತ್ತಾಧಿಕಾರಿಗಳು, ಮುಖ್ಯಸ್ಥರು, ಕಂಪ್ಯೂಟರ್ ಸೈನ್ಸ ವಿಭಾಗ

ರೆ.ಫಾ. ಸೋಮ್ ಜಕರಿಯಾಸ್ ಕಾಲೇಜು ಅಭಿವೃದ್ಧಿ ಹಾಗೂ ಗ್ರಂಥಾಲಯ ನಿರ್ವಾಹಕರು

ರೆ.ಫಾ. ಇಮ್ಯಾನುಯಲ್ ಪಿ.ಜೆ. ನಿರ್ದೇಶಕರು, ಜೆ.ಇ.ಎಸ್.

ವಿಚಾರ ಸಂಕಿರಣದ ಸಂಚಾಲಕರು

ಡಾ. ಸರ್ವೇಶ ಬಿ.ಎಸ್. ಮುಖ್ಯಸ್ಥರು, ಕನ್ನಡ ವಿಭಾಗ –9738482935, 8660263316

ವಿಚಾರ ಸಂಕಿರಣದ ಸಹ ಸಂಚಾಲಕರು

ಪ್ರೊ. ಚಂದ್ರಶೇಖರ್ ಎನ್. – 9916465100

ಪ್ರೊ. ವೆಂಕಟೇಶಪ್ಪ ಪಿ. – 7795534606

ಬಸ್ ಮಾರ್ಗ

ಮೆಜೆಸ್ಟಿಕ್, ಸಿಟಿ ಮಾರ್ಕೆಟ್ ಹಾಗೂ ಶಿವಾಜಿನಗರ ದಿಂದ: 292, 292ಬಿ, 292ಸಿ, 292ಡಿ, 293ಸಿ.

Kristu Jayanti College, (Autonomous)
K. Narayanapura, Kothanur P.O., Bangalore - 560 077, Karnataka, INDIA.
Telephone : 080 - 28465611 / 28465353 / 28465770 Fax: 080 - 28445161
e-mail: kjckannadaseminar2018@gmail.com | www.kristujayantimba.edu.in

Kristu Jayanti College
AUTONOMOUS Bengaluru
Reaccredited 'A' Grade by NAAC | Affiliated to Bangalore University

ಕನ್ನಡ ವಿಭಾಗ

ರಾಷ್ಟ್ರೀಯ ವಿಚಾರ ಸಂಕಿರಣ

"ಜಾನಪದ ಸಾಹಿತ್ಯ–ಸಾಂಸ್ಕೃತಿಕ ಚಿಂತನೆ"

ದಿನಾಂಕ: 07ನೇ ಜನವರಿ, 2019

ಸ್ಥಳ: ಮಿನಿ ಆಡಿ 3, ನಾಲ್ಕನೇ ಮಹಡಿ, ಯುಜಿ ಬ್ಲಾಕ್

ಉದ್ಘಾಟನೆ
ಬೆಳಗ್ಗೆ 10.00ಕ್ಕೆ

ಮುಖ್ಯ ಅತಿಥಿಗಳು

ಪ್ರೊ. ಹಿ.ಚಿ. ಬೋರಲಿಂಗಯ್ಯ

ವಿಮರ್ಶಕರು ಹಾಗೂ ಬರಹಗಾರರು,
ವಿಶ್ರಾಂತ ಕುಲಪತಿಗಳು,
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕ್ರಿಸ್ತು ಜಯಂತಿ ಕಾಲೇಜು

ಕ್ರಿಸ್ತು ಜಯಂತಿ ಕಾಲೇಜು 1999ರಲ್ಲಿ ಆರಂಭವಾಗಿ 'ಬೋಧಿನಿಕೇತನ ಟ್ರಸ್ಟ್' ವತಿಯಿಂದ ನಿರ್ವಹಿಸಲ್ಪಡುತ್ತಿದೆ. ಇದು ಸಿ.ಎಂ.ಐ. ಎಂಬ ದೇಶೀಯ ಕ್ಯಾಥೊಲಿಕ್ ಧರ್ಮದ ಸಮೂಹವಾಗಿದ್ದು 19ನೇ ಶತಮಾನದ ಶೈಕ್ಷಣಿಕ ಮತ್ತು ಸಾಮಾಜಿಕ ಸುಧಾರಕರಾದ ಸಂತ ಕುರಿಯಾಕೋಸ್ ಎಲಿಯಾಸ್ ಚಾವ್ರ ರವರ ದೂರದೃಷ್ಟಿಯಿಂದ ಸಾಕಾರಗೊಂಡದ್ದು. 1946ರಿಂದ ಭಾರತದಾದ್ಯಂತ ಶೈಕ್ಷಣಿಕ ಸೇವೆಯನ್ನೊದಗಿಸುತ್ತಿದೆ. ಈ ಕಾಲೇಜು ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಟ್ಟಿದ್ದು, 2013ರಲ್ಲಿ ಸ್ವಾಯತ್ತ ಸಂಸ್ಥೆಯ ಮಾನ್ಯತೆ ಪಡೆಯಿತು. 'ನ್ಯಾಕ್' ವತಿಯಿಂದ 'ಎ' ಶ್ರೇಣಿಯನ್ನು ಪಡೆದಿದ್ದು, ಯುಜಿಸಿ ವತಿಯಿಂದ ಇ(ಎಫ್) ಮತ್ತು 12(ಬಿ) ಕಾಲಂನ ಅಡಿಯಲ್ಲಿ ಮಾನ್ಯಮಾಡಲ್ಪಟ್ಟಿದೆ. ನಮ್ಮ ಕಾಲೇಜಿನಲ್ಲಿ ಒಟ್ಟು 22 ಪದವಿ ಕೋರ್ಸುಗಳು, 13 ಸ್ನಾತಕೋತ್ತರ ಪದವಿ ಕೋರ್ಸುಗಳು, 3 ಸ್ನಾತಕೋತ್ತರ ಪದವಿಯ ಡಿಪ್ಲೊಮೊ ಕೋರ್ಸುಗಳು ಹಾಗೂ 4 ಸಂಶೋಧನಾ ಕೇಂದ್ರಗಳನ್ನೊಳಗೊಂಡಿದೆ. ಒಟ್ಟು 5737 ವಿದ್ಯಾರ್ಥಿ ಬಲದೊಂದಿಗೆ, 210 ಬೋಧಕ ವರ್ಗದವರನ್ನೊಳಗೊಂಡಿರುತ್ತದೆ.

ಇಂಡಿಯಾ ಟುಡೆ ಪತ್ರಿಕೆಯ ಸಮೀಕ್ಷೆಯ ಪ್ರಕಾರ ಭಾರತೀಯ ಮಟ್ಟದಲ್ಲೇ ಒಂದು ಉತ್ತಮ ಸಂಸ್ಥೆಯೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇದರ ವಿವರಣೆ ಇಂತಿದೆ: 2018ರ ಸಾಲಿನಲ್ಲಿ ಬಿಸಿಎ ನಲ್ಲಿ 5ನೇ ಉತ್ತಮ ಕಾಲೇಜು, ಎಂ.ಎಸ್.ಡಬ್ಲ್ಯು. ನಲ್ಲಿ 13ನೇ ಉತ್ತಮ ಕಾಲೇಜು, ಬಿಬಿಎ ವಿಭಾಗದಲ್ಲಿ 15ನೇ ಉತ್ತಮ ಕಾಲೇಜು, ಕಾಮರ್ಸ್ ವಿಭಾಗದಲ್ಲಿ 16ನೇ, ಕಲಾ ವಿಭಾಗದಲ್ಲಿ 18ನೇ ಹಾಗೂ ವಿಜ್ಞಾನ ವಿಭಾಗದಲ್ಲಿ 26ನೇ ಉತ್ತಮ ಕಾಲೇಜು ಎಂಬ ರಾಷ್ಟ್ರಮಟ್ಟದ ಸ್ಥಾನಮಾನವನ್ನು ಪಡೆದುಕೊಂಡಿದೆ.

ಬೆಂಗಳೂರು ನಗರ ಮಟ್ಟದಲ್ಲಿ ಬಿಸಿಎ ಮತ್ತು ಎಂ.ಎಸ್.ಡಬ್ಲ್ಯು ದಲ್ಲಿ 2ನೇ ಉತ್ತಮ ಕಾಲೇಜಾಗಿ, ಕಾಮರ್ಸ್ ವಿಭಾಗದಲ್ಲಿ 4ನೇ ಹಾಗೂ ಕಲಾ ಮತ್ತು ವ್ಯವಹಾರ ವಿಭಾಗದಲ್ಲಿ 5ನೇ ಉತ್ತಮ ಕಾಲೇಜಾಗಿ ಹೊರಹೊಮ್ಮಿದೆ. ಕ್ರಿಸ್ತು ಜಯಂತಿ ಕಾಲೇಜಿನ ಶೈಕ್ಷಣಿಕ ಸೇವೆಯನ್ನು ಪರಿಗಣಿಸಿ 2018ನೇ ಸಾಲಿನಲ್ಲಿ "ಹೀರೋ ಆಫ್ ಬೆಂಗಳೂರು" ಎಂಬ ಪ್ರತಿಷ್ಠಿತ ಪ್ರಶಸ್ತಿಯನ್ನು ನೀಡಿದ್ದಾರೆ. ಔಟ್ ಲುಕ್ ಸಮೀಕ್ಷೆಯಲ್ಲಿ ಒಟ್ಟಾರೆ ಆಯ್ಕೆಯಲ್ಲಿ 5ನೇ ಉತ್ತಮ ಸಂಸ್ಥೆಯೆಂಬ ಕೀರ್ತಿಗೆ ಪಾತ್ರವಾಗಿರುವುದು ಹೆಮ್ಮೆಯ ಸಂಗತಿಯಾಗಿದೆ.

ಶೈಕ್ಷಣಿಕ ತತ್ವಶಾಸ್ತ್ರ, ಜ್ಞಾನ, ಕೌಶಲ, ಮೌಲ್ಯ ಮತ್ತು ಮನೋಭಾವನೆಗಳ ತಳಹದಿಯಲ್ಲಿ ವಿದ್ಯಾರ್ಥಿಗಳ ಸರ್ವಾಂಗೀಣ ಪ್ರಗತಿಯತ್ತ ಗಮನಹರಿಸಿ ಮಾಹಿತ ತಂತ್ರಜ್ಞಾನದೊಂದಿಗೆ ಜಾಗತಿಕ ಸ್ಪರ್ಧೆಯನ್ನು ಎದುರಿಸುವ ಸಲುವಾಗಿ ಉತ್ಕೃಷ್ಟವಾದ ಮಾಹಿತಿ, ತರಬೇತಿಯನ್ನು ನೀಡಿ ಭವಿಷ್ಯದ ರೂವಾರಿಗಳನ್ನಾಗಿಸುವಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸುವ ಬೋಧಕವರ್ಗವನ್ನು ಹೊಂದಿರುವ ಸಂಸ್ಥೆಯಾಗಿದೆ.

ಕನ್ನಡ ವಿಭಾಗ

ಕ್ರಿಸ್ತು ಜಯಂತಿ ಕಾಲೇಜಿನ ಮಾನವಿಕ ಶಾಸ್ತ್ರಗಳ ನಿಕಾಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕನ್ನಡ ವಿಭಾಗವು 19 ವರ್ಷಗಳಿಂದ ಪದವಿ ಹಂತದ ಬಿ.ಎ., ಬಿ.ಎಸ್ಸಿ., ಬಿ.ಕಾಂ., ಬಿಬಿಎ., ಬಿಸಿಎ., ಕೋರ್ಸ್‌ಗಳಿಗೆ ಕನ್ನಡ ಭಾಷಾ ಪಠ್ಯವನ್ನು ಬೋಧಿಸುತ್ತಿದೆ. ವಿಭಾಗವು ಕಲೆ, ಸಾಹಿತ್ಯ, ಭಾಷೆ, ಸಂಸ್ಕೃತಿಯನ್ನು ಬಿಂಬಿಸುವ ಹಲವು ಸ್ಪರ್ಧೆಗಳು ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ಆಯೋಜಿಸುತ್ತಾ ಬಂದಿದ್ದು ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಕ ಲೋಕದ ದಿಗ್ಗಜರು, ಚಿಂತಕರು, ಬರಹಗಾರರು, ಕಲಾವಿದರೊಂದಿಗೆ ಸದಾ ಸಂಪರ್ಕದಲ್ಲಿದ್ದು ಗುಣಮಟ್ಟದ ಕಾರ್ಯಕ್ರಮಗಳನ್ನು ಆಯೋಜಿಸಿರುವ ಸಂತೃಪ್ತಿ ನಮ್ಮದು. ಕನ್ನಡದ ಕಲಿಕೆಯಲ್ಲಿ ವಿಶೇಷ ಆಸಕ್ತಿವಹಿಸಿ 'ಕನ್ನಡ ಸಾಹಿತ್ಯ ವೇದಿಕೆ'ಯೆಂಬ ಸಾಹಿತ್ಯ ಸಾಂಸ್ಕೃತಿಕ ನೆಲೆಯನ್ನ ಕಟ್ಟಿಕೊಂಡು ಕನ್ನಡೇತರರಿಗೂ ಸಾಹಿತ್ಯದ ಅಭಿರುಚಿಯನ್ನು ಮೂಡಿಸುವ ಹಾಗೂ ವಿದ್ಯಾರ್ಥಿಗಳಲ್ಲಿ ಕಲೆ, ಸಾಹಿತ್ಯದ ರಸಸ್ವಾದನೆಯ ಜೊತೆಗೆ ಓದುವ, ಬರೆಯುವ, ಆಲಿಸುವ ಮಾತನಾಡುವ ಸಾಮರ್ಥ್ಯಗಳನ್ನು ವಿಕಸನಗೊಳಿಸುವ ಕಾರ್ಯವನ್ನು ಕೈಗೊಂಡಿದೆ. ಅಂತೆಯೇ ನಿರಂತರವಾಗಿ 8 ವರ್ಷಗಳಿಂದ ಆಯ್ದ ವಿದ್ಯಾರ್ಥಿಗಳನ್ನು ತಂಡ ತಂಡವಾಗಿ ರಾಷ್ಟ್ರ ಕವಿ ಕುವೆಂಪು ಪ್ರತಿಷ್ಠಾನ, ಕುಪ್ಪಳಿಗೆ ಶೈಕ್ಷಣಿಕ ಪ್ರವಾಸ ಕೈಗೊಂಡು ಕವಿಮನೆ, ಅವರ ಬರಹ, ಬದುಕಿನ ಪರಿಚಯ ಮಾಡಿಕೊಡಲಾಗುತ್ತಿದೆ. ರಾಮನಗರದ ಜಾನಪದಲೋಕಕ್ಕೆ ವಿದ್ಯಾರ್ಥಿಗಳನ್ನು ಕರೆದೊಯ್ದು ಜನಪದ ಸಾಹಿತ್ಯ ಮತ್ತು ಕಲಾಪ್ರಕಾರಗಳ ಕುರಿತು ಮಾಹಿತಿ ನೀಡಲಾಗುತ್ತದೆ. ಮತ್ತೊಂದು ವಿಶೇಷತೆಯೆಂದರೆ ನಮ್ಮ ವಿಭಾಗದಿಂದ ಕನ್ನಡ ರಂಗಭೂಮಿ ವೇದಿಕೆಯನ್ನು ನಿರ್ವಹಿಸುತ್ತಿದ್ದು ಅದರಡಿಯಲ್ಲಿ ನುರಿತ ರಂಗಭೂಮಿ ನಿರ್ದೇಶಕರಿಂದ ವಿದ್ಯಾರ್ಥಿಗಳಿಗೆ ಅಭಿನಯದ ಕಾರ್ಯಗಾರವನ್ನು ನಡೆಸಿ ಆಯ್ದ ನಾಟಕಕ್ಕೆ ವಿಶೇಷ ತರಬೇತಿಯನ್ನು ನೀಡಿ ಪ್ರತಿವರ್ಷ ನಾಟಕ ಪ್ರದರ್ಶನವನ್ನು ನಿರ್ವಹಿಸಲಾಗುವುದು. ಕನ್ನಡ ವಿದ್ಯಾರ್ಥಿಗಳಿಗೆ ವಿಭಾಗವು ಪುಸ್ತಕ ಓದು, ಪುಸ್ತಕ ವಿಮರ್ಶೆ, ಗಾಯನ ಸ್ಪರ್ಧೆ, ಕಾವ್ಯವಾಚನ, ಕವಿಗೋಷ್ಠಿಯಂತಹ ಹಲವು ಸಾಹಿತಿಕ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳುತ್ತಾ ಬಂದಿದೆ.

ವಿಭಾಗವು ಈಗಾಗಲೇ ಪೂರ್ಣಚಂದ್ರ ತೇಜಸ್ವಿ, ಯು.ಆರ್. ಅನಂತಮೂರ್ತಿ ಯವರ ಕುರಿತು ರಾಜ್ಯ ಮಟ್ಟದ ವಿಚಾರ ಸಂಕಿರಣಗಳನ್ನು, ಮಹಿಳಾ ಚಿಂತನೆಗಳು, ಕನ್ನಡ ಸಾಹಿತ್ಯದ ವಿವಿಧ ಕಾಲಘಟ್ಟಗಳ ಕುರಿತಾದ ರಾಷ್ಟ್ರೀಯ ವಿಚಾರ ಸಂಕಿರಣಗಳನ್ನು ಆಯೋಜಿಸಿ ಯಶಸ್ವಿಯಾಗಿದೆ. ಪ್ರಸ್ತುತ ವರ್ಷ 'ಜಾನಪದ ಸಾಹಿತ್ಯ'ದ ಹಿನ್ನೆಲೆಯಲ್ಲಿ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಆಯೋಜಿಸಿ ಸಂಶೋಧನಾರ್ಥಿಗಳಿಗೆ ಹಾಗೂ ಉಪನ್ಯಾಸಕ ವರ್ಗಕ್ಕೆ ಪತ್ರಿಕಾ ಮಂಡನೆಗೆ ಅವಕಾಶ ಮಾಡಿಕೊಡಲಾಗಿದ್ದು ತಾವುಗಳು ಸಕಾಲಕ್ಕೆ ತಮ್ಮ ಪತ್ರಿಕೆಗಳು ನಮಗೆ ತಲುಪುವಂತೆ ಮಾಡಿ ಕಾರ್ಯಕ್ರಮದ ಒಟಾರೆ ಯಶಸ್ವಿಗೆ ಕಾರಣರಾಗಬೇಕೆಂದು ಕೋರುವ

ಕನ್ನಡ ವಿಭಾಗ

ನೋಂದಣಿ: **ಬೆಳಗ್ಗೆ 8.30 ರಿಂದ 10.00ವರೆಗೆ**

ಉದ್ಘಾಟನೆ: **ಬೆಳಗ್ಗೆ 10.00ಕ್ಕೆ**

ಗೋಷ್ಠಿ 1: ಬೆಳಗ್ಗೆ 11.00ಕ್ಕೆ

ವಿಷಯ: **ಜನಪದ ಕಾವ್ಯದಲ್ಲಿ ಸ್ಥಾಯಿಭಾವ**

ಮಂಡನೆ: **ಡಾ. ಕುರುವ ಬಸವರಾಜ್** ಜಾನಪದ ವಿದ್ವಾಂಸರು ಹಾಗೂ ಆಡಳಿತಾಧಿಕಾರಿಗಳು, ಜಾನಪದಲೋಕ, ರಾಮನಗರ.

ವಿಷಯ: **ಜಾನಪದ ತ್ರಿಪದಿಗಳಲ್ಲಿ ಸಾಂಸ್ಕೃತಿಕ ಪ್ರಜ್ಞೆ**

ಮಂಡನೆ: **ಪ್ರೊ. ಶೀಲಾ ಪ್ರಕಾಶ್** ಮುಖ್ಯಸ್ಥರು, ಕನ್ನಡ ವಿಭಾಗ, ಎನ್.ಎಂ.ಕೆ.ಆರ್.ವಿ. ಕಾಲೇಜು, ಬೆಂಗಳೂರು.

ಅಧ್ಯಕ್ಷತೆ: **ಡಾ. ಪಿ.ಕೆ. ರಾಜಶೇಖರ್** ಜಾನಪದ ವಿದ್ವಾಂಸರು ಹಾಗೂ ನಿವೃತ್ತ ಪ್ರಾಧ್ಯಾಪಕರು, ಮಾನಸ ಗಂಗೋತ್ರಿ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಗೋಷ್ಠಿ 2: ಮಧ್ಯಾಹ್ನ 2.00ಕ್ಕೆ ಪತ್ರಿಕಾ ಮಂಡನೆ

ಸಮಾರೋಪ ಸಮಾರಂಭ: ಸಂಜೆ 4.00ಕ್ಕೆ

ಮುಖ್ಯ ಅತಿಥಿಗಳು **ಡಾ. ಎಂ.ಎನ್. ವೆಂಕಟೇಶ** ಕುಲಸಚಿವರು ಮೌಲ್ಯಮಾಪನ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಗೊಟಗೋಡಿ, ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ.

ಪ್ರಬಂಧ ಮಂಡನೆಗೆ ವಿಷಯಗಳು (ಜಾನಪದಕ್ಕೆ ಸಂಬಂಧಿಸಿದಂತೆ ಇತರೆ ಲೇಖನಗಳನ್ನೂ ಕಳುಹಿಸಬಹುದು)

1. ಜನಪದ ಸಾಹಿತ್ಯಕ್ಕೆ ಪಾಶ್ಚಾತ್ಯರ ಕೊಡುಗೆ
2. ಭಾಷೆ ಮತ್ತು ಜನಪದ
3. ಜನಪದ ಸಾಹಿತ್ಯ ಮತ್ತು ಶಿಷ್ಟಸಾಹಿತ್ಯ
4. ಪ್ರಸ್ತುತ ಜನಪದ ಕಲಾವಿದರ ಸ್ಥಿತಿಗತಿಗಳು
5. ಜನಪದ ಗಾದೆಗಳ ವಿಶ್ಲೇಷಣೆ
6. ಜನಪದ ರಂಗಭೂಮಿ
7. ಸಮೂಹ ಮಾಧ್ಯಮಗಳು ಮತ್ತು ಜಾನಪದ
8. ಆಧುನಿಕ ಜಾನಪದದ ಸ್ವರೂಪ
9. ಸ್ವಾತಂತ್ಯ ಸಂಗ್ರಾಮ ಹಾಗೂ ಜಾನಪದ
10. ಜನಪದ ಮಹಾ ಕಾವ್ಯಗಳು
11. ಆದಿವಾಸಿ ಜಾನಪದ ಸ್ವರೂಪ
12. ಜನಪದ ಅಡಿಗೆಗಳು
13. ಜನಪದ ಕ್ರೀಡೆಗಳು
14. ಜಾನಪದ ವೈಜ್ಞಾನಿಕ ನೆಲೆಗಳು

- ವಿಷಯ ಕುರಿತು ಸಾರಲೇಖನ ಕಳುಹಿಸಲು ಕೊನೆ ದಿನಾಂಕ 15–12–2018
- ಪೂರ್ಣ ಪತ್ರಿಕೆ ಕಳುಹಿಸಲು ಕೊನೆ ದಿನಾಂಕ 20–12–2018
- ಮಂಡಿಸಿದ ಲೇಖನಗಳನ್ನು ISSN: 2454–5813 ಪುಸ್ತಕದಲ್ಲಿ ಪ್ರಕಟಿಸಲಾಗುವುದು

ನೋಂದಣಿ ಶುಲ್ಕ:

ಭಾಗವಹಿಸಲು

ಸಂಶೋಧನಾರ್ಥಿಗಳಿಗೆ – Rs. 200.00

ಪ್ರಾಧ್ಯಾಪಕರಿಗೆ – Rs. 400.00

ಭಾಗವಹಿಸಲು ಹಾಗೂ ಪತ್ರಿಕೆ ಮಂಡಿಸಲು

ಸಂಶೋಧನಾರ್ಥಿಗಳಿಗೆ – Rs. 800.00

ಪ್ರಾಧ್ಯಾಪಕರಿಗೆ – Rs. 1000.00